# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಕೆಜಿಟಿಟಿಐ ಸಂಸ್ಥೆಗೆ ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆಯಡಿಯಲ್ಲಿ ತರಬೇತಿ ಕಾರ್ಯಕ್ರಮಗಳಿಗೆ ಮಂಜೂರಾತಿಯನ್ನು ನೀಡುವ ಬಗ್ಗೆ.

**ಓದಲಾಗಿದೆ:** 1. ಸಿಎಂಕೆಕೆವೈ ಸರ್ಕಾರಿ ಆದೇಶದ ಸಂಖ್ಯೆ: ಕೌಉಜಿಇ 49 ಕೈತಶಿ (ಭಾಗ-1), ದಿನಾಂಕ: 08.05-2017.

2. ಸದಸ್ಯ ಕಾರ್ಯದರ್ಶಿ, ಕೆಜಿಎಂಎಸ್‌ಡಿಸಿ ಇವರ ಪತ್ರ ಸಂಖ್ಯೆ: ಕೆಜಿಎಸ್/ಪಿಎಲ್‌ಎನ್/ಆರ್‌ಎಪಿ/ಸಿಆರ್-11/2017-18 ದಿನಾಂಕ:24.10.2017.

3. ಅಧಿಕಾರಯುಕ್ತ ಸಮಿತಿ ಸಭೆ ದಿನಾಂಕ: 05-06-2017 ನಡವಳಿಗಳು.

4. ಅಧಿಕಾರಯುಕ್ತ ಸಮಿತಿ ಸಭೆ ದಿನಾಂಕ 30-10-2017ರ ನಡವಳಿಗಳು.

5. ಆರ್ಥಿಕ ಇಲಾಖೆಯು ಅಧಿಸೂಚನೆ ಸಂಖ್ಯೆ: ಆಇ 729 ವೆಚ್ಚ 12/17, ದಿನಾಂಕ: 01.07.2017.

6. ಸರ್ಕಾರದ ಸುತ್ತೋಲೆ ಸಂಖ್ಯೆ: ಕೌಉಜಿಇ 311 ಕೈತಇ 2017, ದಿನಾಂಕ: 23-08-2017.

**ಪ್ರಸ್ತಾವನೆ:**

ದಿನಾಂಕ: 05.06.2017ರಂದು ನಡೆದ ಅಧಿಕಾರಯುಕ್ತ ಸಮಿತಿ ಸಭೆಯಲ್ಲಿ "ಕೆಜಿಟಿಟಿಐ ಸಲ್ಲಿಸಿರುವ 6 ವರ್ಷಗಳ ಪ್ರಸ್ತಾವನೆಯ ಬಗ್ಗೆ ಚರ್ಚಿಸುತ್ತಾ ಸಂಸ್ಥೆಯಲ್ಲಿರುವ 5 ಕೇಂದ್ರಗಳನ್ನು ಕೆ.ವಿ.ಟಿ.ಎಸ್.ಡಿ.ಸಿ.ಯಿಂದ ಸಾಲ ಪಡೆದು ಬಂಡವಾಳ ವೆಚ್ಚ ಹೂಡಿ ಬಲವರ್ಧಿಸುವ ಮೂಲಕ ತರಬೇತಿ ಸಾಮರ್ಥ್ಯವನ್ನು ಹೆಚ್ಚಿಸುವ ಕ್ರಿಯಾ ಯೋಜನೆಯ ಬಗ್ಗೆ ಚರ್ಚಿಸಲಾಯಿತು. ಈ ಯೋಜನೆಗೆ 2017-18ನೇ ಸಾಲಿನಲ್ಲಿ ಒಟ್ಟಾರೆ ತಗಲುವ ಬಂಡವಾಳ ವೆಚ್ಚವಾದ 11.40 ಕೋಟಿ ರೂಗಳಿಗೆ ಕರ್ನಾಟಕ ವೃತ್ತಿ ತರಬೇತಿ ಮತ್ತು ಕೌಶಲ್ಯ ಅಭಿವೃದ್ಧಿ ನಿಗಮದಿಂದ ಸಾಲದ ರೂಪದಲ್ಲಿ ಪಡೆದು ಶುಲ್ಕ ಮರುಪಾವತಿಯಿಂದ ಬಂದ ಹಣವನ್ನು ನಿಗಮಕ್ಕೆ ಮರುಪಾವತಿಸಲು ಪ್ರಸ್ತಾಪಿಸಲಾಗಿದೆ. ಆದುದರಿಂದ 2017-18ರಲ್ಲಿ 11.40 ಕೋಟಿ ರೂಗಳು ಹಾಗೂ ತದನಂತರದ ಸಾಲುಗಳಲ್ಲಿ ಬಂಡವಾಳ ವೆಚ್ಚವನ್ನಾಗಿ ವಿನಿಯೋಗಿಸಲು ಆರ್ಥಿಕ ಇಲಾಖೆಯವರ ಸಹಮತಿ ಹಾಗೂ ಈ ಪ್ರಸ್ತಾವನೆಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999ರ ಸೆಕ್ಷನ್ 4(g) ಅನುಮತಿ ಪಡೆಯಲು ಸೂಚಿಸಲಾಯಿತು". ಈ ಪ್ರಸ್ತಾವನೆಗೆ ಮೇಲೆ ಓದಲಾದ ಕ್ರಮಸಂಖ್ಯೆ (5)ರ ದಿನಾಂಕ: 01-07-2017ರಲ್ಲಿ ಆರ್ಥಿಕ ಇಲಾಖೆಯು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999ರ ಸೆಕ್ಷನ್ 4(g) ಯಡಿ ವಿನಾಯಿತಿ ನೀಡಿದೆ.

ಅಧ್ಯಕ್ಷರು **ಕರ್ನಾಟಕ ಜರ್ಮನ್ ಬಹು ಕೌಶಲ್ಯ ಅಭಿವೃದ್ಧಿ ಕೇಂದ್ರ ಸೊಸೈಟಿ** (ಕೆ.ಜಿ.ಎಂ.ಎಸ್.ಡಿ.ಸಿ) ಇವರು 13ನೇ ಗೌರ್ನಿಂಗ್ ಸಭೆಯಲ್ಲಿ ಕೆಜಿಟಿಟಿಐಗಳಲ್ಲಿ ನೀಡುವ ತರಬೇತಿಗಳನ್ನು ಕೋರ್ ಏರಿಯಾದಲ್ಲಿ ಮಾತ್ರ ನೀಡಲು ಅನುಮೋದಿಸಿದ ಕಾರಣ ಸದಸ್ಯ ಕಾರ್ಯದರ್ಶಿ, ಕೆಜಿಎಂಎಸ್‌ಡಿಸಿ ಇವರು ಮೊದಲಿನ ಪ್ರಸ್ತಾವನೆಯನ್ನು ಪರಿಷ್ಕರಿಸಿ **5700 ಅಭ್ಯರ್ಥಿಗಳಿಗೆ** ಉಚಿತವಾಗಿ 3 ತಿಂಗಳ ಅವಧಿಯ ತರಬೇತಿ ನೀಡಲು ಹಾಸ್ಟೆಲ್ ವೆಚ್ಚವು ಹೊರತುಪಡಿಸಿ ತರಬೇತಿ ವೆಚ್ಚ ಒಟ್ಟು ರೂ. **577.79** ಲಕ್ಷಗಳ ಪ್ರಸ್ತಾವನೆಯನ್ನು ಮೇಲೆ ಓದಲಾದ ಕ್ರಮಸಂಖ್ಯೆ (2) ರ ಪತ್ರದಲ್ಲಿ ಸಲ್ಲಿಸಿದ್ದರು.

ದಿನಾಂಕ: 30.10.2017 ರಂದು ಅಧಿಕಾರಯುಕ್ತ ಸಮಿತಿಯು ಮೇಲೆ ಓದಲಾದ ಕ್ರಮಸಂಖ್ಯೆ: (4) ರ ನಡವಳಿಯ ಕಂಡಿಕೆ 3ರಲ್ಲಿ ಕೆಜಿಎಂಎಸ್‌ಡಿಸಿ ಸದಸ್ಯ ಕಾರ್ಯದರ್ಶಿಯವರು **ಅನುಬಂಧ**ದಲ್ಲಿ ಸಲ್ಲಿಸಿದ ಪರಿಷ್ಕೃತ ಪ್ರಸ್ತಾವನೆಗೆ ಅನುಮೋದನೆಯನ್ನು ನೀಡಿದೆ.

ಕರ್ನಾಟಕ ಸರ್ಕಾರದ (ಕಾರ್ಯಕಲಾಪಗಳ ನಿರ್ವಹಣೆ) ನಿಯಮಗಳು, 1977ರ ಮೊದಲನೆ ಅನುಸೂಚಿಯ ಅಂಶ 15 ಹಾಗೂ ಆರ್ಥಿಕ ಇಲಾಖೆಯ ತಿದ್ದೋಲೆ ಸಂಖ್ಯೆ: ಎಫ್‌ಡಿ 04 ಟಿಎಫ್‌ಪಿ 2015 ದಿನಾಂಕ: 02/01/2016 ರಲ್ಲಿ ನೀಡಿರುವ ಆಡಳಿತ್ಮಾಕ ಅನುಮೋದನೆಯ ಅಧಿಕಾರವನ್ನು ಪ್ರತ್ಯಾಯೋಜಿಸಿ ಆದೇಶವನ್ನು ಹೊರಡಿಸಬಹುದಾಗಿದೆ.

ಆದ್ದರಿಂದ ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

**ಸರ್ಕಾರಿ ಆದೇಶ ಸಂ: ಕೌಉಜೀಇ 589 ಕೈತಇ 2017, ಬೆಂಗಳೂರು, ದಿನಾಂಕ: 14.11.2017**

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನಲೆಯಲ್ಲಿ **ಕರ್ನಾಟಕ ಜರ್ಮನ್ ಬಹು ಕೌಶಲ್ಯ ಅಭಿವೃದ್ಧಿ ಕೇಂದ್ರ ಸೊಸೈಟಿ (ಕೆಜಿಟಿಟಿಐ), ಸಿಒಇ ಕಟ್ಟಡ, ಕೌಶಲ್ಯ ಭವನದ ಆವರಣ, ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ (ಮಹಿಳಾ) ಹಿಂಭಾಗ, ಬನ್ನೇರು ಘಟ್ಟ ರಸ್ತೆ, ಬೆಂಗಳೂರು-560 029** ರವರು ತರಬೇತಿ ನೀಡಲು ಗುರಿಗಳ ಹಂಚಿಕೆ, ಅಭ್ಯರ್ಥಿಗಳಿಗೆ ತರಬೇತಿ, ಮೌಲ್ಯಮಾಪನ, ಪ್ರಮಾಣೀಕರಣ, ಉದ್ಯೋಗ ನಿಯುಕ್ತಿ ಮತ್ತು ಉದ್ಯೋಗ ನಿಯುಕ್ತಿ ನಂತರದ ಸೇವೆಗಳ ಕುರಿತು ವಿಧಾನಗಳ ಮಾರ್ಗಸೂಚಿಯನ್ನು ಅನುಸರಿಸಿ ***ಅನುಬಂಧದಲ್ಲಿ*** ನಮೂದಿಸಿದ ತರಬೇತಿ ಸಂಸ್ಥೆಗಳಲ್ಲಿ ಅವುಗಳ ಎದುರಿಗೆ ನಮೂದಿಸಿದ ಉದ್ಯೋಗ ವೃತ್ತಿ ತರಬೇತಿಗಳನ್ನು ಕೈಗೊಳ್ಳಲು **5 ಜಿಲ್ಲೆ ಹಾಗೂ 27 ಕೋರ್ಸ್‌ಗಳಲ್ಲಿ ಒಟ್ಟು 5700 ಅಭ್ಯರ್ಥಿಗಳಿಗೆ 577.79 ಲಕ್ಷ ರೂಗಳ (ಐದು ನೂರ ಎಪ್ಪತ್ತೇಳು ಲಕ್ಷ ಎಪ್ಪತ್ತೊಂಬತ್ತು ಸಾವಿರ ರೂಗಳು ಮಾತ್ರ)** ರೂ ಗಳಿಗೆ ಆರ್ಥಿಕ ಇಲಾಖೆ ಅಧಿಸೂಚನೆ ಸಂಖ್ಯೆ: ಆಇ 729 ವೆಚ್ಚ 12/17, ದಿನಾಂಕ: 01.07.2017ರಲ್ಲಿ ಕೆಟಿಪಿಪಿ ಕಾಯ್ದೆಯ ಕಲಂ 4(ಜಿ)ಯಡಿ ವಿನಾಯಿತಿ ನೀಡಿದೆ ಹಾಗೂ ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು ಮಂಜೂರಾತಿಯನ್ನು ನೀಡಿ ಆದೇಶಿಸಿದೆ.

ಕರ್ನಾಟಕ ಸರ್ಕಾರದ (ಕಾರ್ಯಕಲಾಪಗಳ ನಿರ್ವಹಣೆ) ನಿಯಮಗಳು, 1977ರ ಮೊದಲನೆ ಅನುಸೂಚಿಯ ಅಂಶ 15 ಹಾಗೂ ಆರ್ಥಿಕ ಇಲಾಖೆಯ ತಿದ್ದೋಲೆ ಸಂಖ್ಯೆ: ಎಫ್‌ಡಿ 04 ಟಿಎಫ್‌ಪಿ 2015 ದಿನಾಂಕ: 02/01/2016 ರಲ್ಲಿ ನೀಡಿರುವ ಆಡಳಿತ್ಮಾಕ ಅನುಮೋದನೆಯ ಅಧಿಕಾರವನ್ನು ಪ್ರತ್ಯಾಯೋಜಿಸಿ ಆದೇಶವನ್ನು ಹೊರಡಿಸಬಹುದಾಗಿದೆ.

ಈ ತರಬೇತಿ ವೆಚ್ಚವನ್ನು ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆಯ ವಾಹಿನಿ-1 ರಡಿ ಲೆಕ್ಕ ಶೀರ್ಷಿಕೆ 2230-02-101-0-09 ಕೌಶಲ್ಯ ಅಭಿವೃದ್ಧಿ ಮಿಷನ್ ಅಡಿಯಲ್ಲಿ ಭರಿಸುವುದು.

## ಷರತ್ತು ಮತ್ತು ನಿಬಂಧನೆಗಳು

1. ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆ ಇವರು ಈ ಕೆಳಗಿನ ಕ್ರಮಗಳನ್ನು ಅನುಸರಿಸಿ ಮೇಲಿನ ವೃತ್ತಿ ತರಬೇತಿ ಸಂಸ್ಥೆಗೆ ತರಬೇತಿ ಕಾರ್ಯಕ್ರಮಗಳನ್ನು ಪ್ರಾರಂಭಿಸಲು ಅನುಮತಿ ನೀಡುವುದು.

2. ವೃತ್ತಿ ಸಂಸ್ಥೆಗೆ ತರಬೇತಿಯ ಗುರಿಗಳ ಹಂಚಿಕೆ, ಅಭ್ಯರ್ಥಿಗಳಿಗೆ ತರಬೇತಿ, ಮೌಲ್ಯಮಾಪನ, ಪ್ರಮಾಣೀಕರಣ, ಉದ್ಯೋಗ ನಿಯುಕ್ತಿ ಮತ್ತು ಉದ್ಯೋಗ ನಿಯುಕ್ತಿ ನಂತರದ ಸೇವೆಗಳ ಕುರಿತ ವಿಧಾನಗಳ ಮಾರ್ಗಸೂಚಿಯಂತೆ ತಪಾಸಣೆ, **ಒಡಂಬಡಿಕೆಗೆ ಸಹಿಗಳನ್ನು ಹೊರತುಪಡಿಸಿ** ಮುಂದಿನ ಕ್ರಮಗಳನ್ನು ಕೈಗೊಳ್ಳುವುದು.

3. ಕೇಂದ್ರ ಸರ್ಕಾರದ ಕೌಶಲ್ಯಾಭಿವೃದ್ಧಿ ಮತ್ತು ಉದ್ಯಮಶೀಲತೆ ಮಂತ್ರಾಲಯವು ನಿಗದಿಪಡಿಸಿದ ಸಾಮಾನ್ಯ ಮಾನದಂಡಗಳ (ಕ್ರ.ಸಂ.H-22011/2/14-SDE-1, dated: 15.07.2015 and 20.05.2016: Schedule-IV)ರನ್ವಯ ಕಂತುಗಳಲ್ಲಿ ಪಾವತಿ ಮಾಡುವ ವಿಧಾನದ ಆಧಾರದ ಮೇಲೆ ಅನುದಾನವನ್ನು ಬಿಡುಗಡೆ ಮಾಡುವುದು.

4. ಎಲ್ಲಾ ತರಬೇತಿ ಕಾರ್ಯಕ್ರಮಗಳು ಪೂರ್ಣಗೊಂಡ ನಂತರ ಪ್ರಮಾಣಪತ್ರಗಳನ್ನು ನೀಡುವುದು. ಪ್ರಮಾಣಪತ್ರವನ್ನು ನೀಡಿದ ನಂತರ ಕನಿಷ್ಟ ಶೇಕಡ 70ರಷ್ಟು ಅಭ್ಯರ್ಥಿಗಳಿಗೆ ಉದ್ಯೋಗ ನಿಯುಕ್ತಿಗೊಳಿಸುವುದು ಅಥವಾ ಸ್ವಯಂ ಉದ್ಯೋಗ ಕಲ್ಪಿಸುವುದು.

5. ಎಲ್ಲಾ ತರಬೇತಿ ಕಾರ್ಯಕ್ರಮಗಳನ್ನು 2017-18ರ ಆರ್ಥಿಕ ವರ್ಷದಲ್ಲಿಯೇ ಪ್ರಾರಂಭಿಸುವುದು. ಮಾರ್ಗಸೂಚಿಯನ್ನು ಅನುಸರಿಸಿ ಉಸ್ತುವಾರಿ ಮಾಹಿತಿ ವ್ಯವಸ್ಥೆಯನ್ನು (ಎಂಐಎಸ್) ತಯಾರಿಸಿ ಕಾರ್ಯಕ್ರಮದ ಅನುಷ್ಠಾನದ ಜವಾಬ್ದಾರಿಯನ್ನು ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆಯವರು ನಿರ್ದೇಶಕರು ಕೌಶಲ್ಯ ಮಿಷನ್ ಮತ್ತು ನಿರ್ದೇಶಕರು ಉದ್ಯೋಗ ಮತ್ತು ತರಬೇತಿ ಇಲಾಖೆಯವರ ಸಹಾಯದೊಂದಿಗೆ ಅನುಷ್ಠಾನಗೊಳಿಸುವುದು.

6. ಕೆಜಿಟಿಟಿಐ ಸಂಸ್ಥೆಯು ತರಬೇತಿ ಸಂಸ್ಥೆಯನ್ನು www.kaushalkar.com ವೆಬ್ ಪೋರ್ಟಲ್‌ನಲ್ಲಿ ಕಡ್ಡಾಯವಾಗಿ ನೊಂದಾಯಿಸುವುದು. ಅನುಮೋದಿತ ವೃತ್ತಿ ತರಬೇತಿ ಕಾರ್ಯಕ್ರಮಗಳ ಫಲಾನುಭವಿಗಳನ್ನು www.kaushalkar.com ವೆಬ್ ಪೋರ್ಟಲ್‌ನಿಂದ ಪಡೆಯುವುದು. ಒಂದು ವೇಳೆ ಫಲಾನುಭವಿಗಳು ಕೆಜಿಟಿಟಿಐ ಸಂಸ್ಥೆಯಿಂದ ಆಯ್ಕೆ ಮಾಡಿಕೊಂಡಲ್ಲಿ ಇವರುಗಳ ಹೆಸರನ್ನು ವೆಬ್ ಪೋರ್ಟಲ್‌ನಲ್ಲಿ ಕಡ್ಡಾಯವಾಗಿ ನೊಂದಯಿಸವುದು.

7. ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆಯ ಅನುಷ್ಠಾನಗೊಳಿಸಲು ಸರ್ಕಾರಿ ಆದೇಶ ಸಂಖ್ಯೆ: ಕೌಉಜೀಇ 49 ಕೃತಶಿ (ಭಾಗ-1) ದಿನಾಂಕ: 08.05.2017ರಲ್ಲಿ ಹೊರಡಿಸಲಾಗಿರುವ ಮಾರ್ಗಸೂಚಿಯಂತೆ ವಿವಿಧ ವರ್ಗಗಳಿಗೆ ಒಟ್ಟು ತರಬೇತಿ ಅಭ್ಯರ್ಥಿಗಳಿಗೆ ನಿಗಧಿಪಡಿಸಿದಂತೆ ಶೇಕಡವಾರು ಮೀಸಲಾತಿಯನ್ನು ಅನುಸರಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಈರಣ್ಣ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು
ಜೀವನೋಪಾಯ ಇಲಾಖೆ

ಇವರಿಗೆ:

1. ಮಹಾಲೇಖಪಾಲರು, (ಎ&ಇ), ಜಿ&ಎಸ್.ಎಸ್.ಎ), ಇ &ಆರ್.ಎಸ್.ಎ) ಕರ್ನಾಟಕ, ಬೆಂಗಳೂರು.
2. ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆ.
3. ನಿರ್ದೇಶಕರು ಕರ್ನಾಟಕ ಕೌಶಲ್ಯ ಮಿಷನ್ ಉದ್ಯೋಗ ಮತ್ತು ತರಬೇತಿ ಇಲಾಖೆ.
4. ನಿರ್ದೇಶಕರು, ಉದ್ಯೋಗ ಮತ್ತು ತರಬೇತಿ ಇಲಾಖೆ.
5. ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ.

6. ಸಂಬಂಧಪಟ್ಟ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳಿಗೆ.
7. ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾ ಮಟ್ಟದ ತಾಲ್ಲೂಕು ನೋಡಲ್ ಅಧಿಕಾರಿಗಳು.
8. ಸಂಬಂಧಪಟ್ಟ ಜಿಲ್ಲಾ ಕೌಶಲ್ಯ ಮಿಷನ್‌ನ ಸದಸ್ಯ ಕಾರ್ಯದರ್ಶಿಗಳಿಗೆ
9. ಕರ್ನಾಟಕ ಜರ್ಮನ್ ಬಹು ಕೌಶಲ್ಯ ಅಭಿವೃದ್ಧಿ ಕೇಂದ್ರ ಸೊಸೈಟಿ (ಕೆಜಿಟಿಟಿಐ), ಸಿಒಇ ಕಟ್ಟಡ, ಕೌಶಲ್ಯ ಭವನದ ಆವರಣ, ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ (ಮಹಿಳಾ) ಹಿಂಭಾಗ, ಬನ್ನೇರು ಘಟ್ಟ ರಸ್ತೆ, ಬೆಂಗಳೂರು-560 029.
10. ಸಂಬಂಧಪಟ್ಟ ಎಲ್ಲಾ ಕರ್ನಾಟಕ ಜರ್ಮನ್ ಬಹು ಕೌಶಲ್ಯ ಅಭಿವೃದ್ಧಿ ಕೇಂದ್ರ ಸೊಸೈಟಿ (ಕೆಜಿಟಿಟಿಐ) ಗಳಿಗೆ.
11. ಸಂಬಂಧಪಟ್ಟ ತಾಲ್ಲೂಕುಗಳಲ್ಲಿನ ಪ್ರಾಂಶುಪಾಲರು ಕೈಗಾರಿಕಾ ತರಬೇತಿ ಕೇಂದ್ರ.

**ಪ್ರತಿಯನ್ನು :**

1. ಮಾನ್ಯ ಮುಖ್ಯ ಕಾರ್ಯದರ್ಶಿಯವರು, ಕರ್ನಾಟಕ ಸರ್ಕಾರ, ವಿಧಾನ ಸೌಧ, ಬೆಂಗಳೂರು
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಆಯುಕ್ತರು
3. ಮಾನ್ಯ ಮುಖ್ಯ ಮಂತ್ರಿಯವರ ಪ್ರಧಾನ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು
4. ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಹಾಗೂ ಕಾರ್ಮಿಕ ಸಚಿವರ ಆಪ್ತ ಕಾರ್ಯದರ್ಶಿಯವರಿಗೆ ವಿಧಾನ ಸೌಧ, ಬೆಂಗಳೂರು.
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು
6. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ ಸಂಯೋಜನೆ, ಮತ್ತು ಸಾಂಖ್ಯಿಕ ಇಲಾಖೆ.
7. ಸರ್ಕಾರದ ಕಾರ್ಯದರ್ಶಿ, ಆರ್ಥಿಕ ಇಲಾಖೆ, (ವೆಚ್ಚ-3&9),ವಿಧಾನ ಸೌಧ, ಬೆಂಗಳೂರು
8. ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆ, ಬೆಂಗಳೂರು.
9. ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ
10. ಮಿಷನ್ ನಿರ್ದೇಶಕರು, ಸಂಜೀವಿನಿ - ಕೆ.ಎಸ್.ಆರ್.ಎಲ್.ಪಿ.ಎಸ್.
11. ಮುಖ್ಯ ಯೋಜನಾಧಿಕಾರಿಗಳು, ನಗರ ಬಡತನ ನಿರ್ಮೂಲನಾ ನಿರ್ವಹಣಾ ಘಟಕ (ಯುಪಿಎಎಂಯು)
12. ಮುಖ್ಯ ಕಾರ್ಯಾಚರಣೆ ಅಧಿಕಾರಿ, ಸಂಜೀವಿನಿ- ಕೆ.ಎಸ್.ಆರ್.ಎಲ್.ಪಿ.ಎಸ್. (ಸ್ಕಿಲ್ಸ್).
13. ಕೌಶಲ್ಯಾಭಿವೃದ್ಧಿ ತರಬೇತಿಗೆ ಸಂಬಂಧಿಸಿದ ಇಲಾಖಾ ಮುಖ್ಯಸ್ಥರು
14. ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಹಾಗೂ ಕಾರ್ಮಿಕ ಸಚಿವರ ಆಪ್ತ ಕಾರ್ಯದರ್ಶಿಯವರಿಗೆ ವಿಧಾನ ಸೌಧ, ಬೆಂಗಳೂರು.
15. ಖಜಾನಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
16. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ
17. ಆಂತರಿಕ ಆರ್ಥಿಕ ಸಲಹೆಗಾರರು, ವಾಣಿಜ್ಯ ಮತ್ತು ಕೈಗಾರಿಕೆ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ವಿಕಾಸ ಸೌಧ.
18. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.

ಉದ್ಯೋಗ ಮತ್ತು ತರಬೇತಿ ಇಲಾಖೆ
ಕರ್ನಾಟಕ ಜರ್ಮನ್ ಬಹು ಕೌಶಲ್ಯ ಅಭಿವೃದ್ಧಿ ಕೇಂದ್ರ ಸೊಸೈಟಿ
(ಕರ್ನಾಟಕ ಸರ್ಕಾರದ ಅಧೀನಕೊಳಪಟ್ಟಿರುತ್ತದೆ)

ಸಂ: ಕೆಜಿಎಸ್/ ಪಿಎಲ್ಎನ್/ ಆರ್ಎಪಿ/ಸಿಆರ್-11 / 2017-18

ಕರ್ನಾಟಕ ಜರ್ಮನ್ ಬಹು ಕೌಶಲ್ಯ ಅಭಿವೃದ್ಧಿ ಕೇಂದ್ರ ಕಛೇರಿ,
ಸಿಒಇ ಕಟ್ಟಡ, ಕೌಶಲ್ಯ ಭವನದ ಆವರಣ ,
ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ (ಮಹಿಳಾ) ಹಿಂಭಾಗ ,
ಬನ್ನೇರು ಘಟ್ಟ ರಸ್ತೆ, ಬೆಂಗಳೂರು-560029
ದಿನಾಂಕ : 24.10.2017

ಗೆ,
ಅಪರ ಮುಖ್ಯ ಕಾರ್ಯದರ್ಶಿಗಳು
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ
ಬೆಂಗಳೂರು.

ಮಾನ್ಯರೇ,

ವಿಷಯ : 2017-18 ನೇ ಸಾಲಿನ ಪುನರ್ ಪರಿಷ್ಕೃತ ಕ್ರಿಯಾ ಯೋಜನೆ ಸಲ್ಲಿಸುವ ಕುರಿತು.
ಉಲ್ಲೇಖ : 1. ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಯವರ, ಕೌಉಜೀಇ, ದಿನಾಂಕ 17.08.2017 ನಡೆದ ಸಭೆ
2. ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಯವರ, ಕೌಉಜೀಇ, ದಿನಾಂಕ 05.09.2017 ನಡೆದ ಸಭೆ
3. ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಯವರ, ಕೌಉಜೀಇ, ದಿನಾಂಕ 27.09.2017 ನಡೆದ ಸಭೆ

*********

ಕೆ.ಜಿ.ಎಂ.ಎಸ್.ಡಿ.ಸಿ.ಗೆ 2017-18 ನೇ ಸಾಲಿನಲ್ಲಿ ರೂ. 31.00 ಕೋಟಿ ಅನುದಾನ ಹಂಚಿಕೆ ಮಾಡಲಾಗಿದೆ. ಈ ಸಾಲಿನಲ್ಲಿ ಕೆ.ಜಿ.ಟಿ.ಟಿ.ಐ ಬೆಂಗಳೂರಿನಲ್ಲಿ 1600, ಕೆ.ಜಿ.ಟಿ.ಟಿ.ಐ ಕಲಬುರಗಿಯಲ್ಲಿ 1700, ಕೆ.ಜಿ.ಟಿ.ಟಿ.ಐ ಬೆಳಗಾವಿಯಲ್ಲಿ 600, ಕೆ.ಜಿ.ಟಿ.ಟಿ.ಐ ಮಂಗಳೂರಿನಲ್ಲಿ 700 ಹಾಗೂ ಕೆ.ಜಿ.ಟಿ.ಟಿ.ಐ ಹುಬ್ಬಳ್ಳಿಯಲ್ಲಿ 400 ಒಟ್ಟು 5000 ಭೌತಿಕ ಗುರಿ ನಿಗಧಿಪಡಿಸಲಾಗಿದೆ. ವಿವರಗಳನ್ನು ಅನುಬಂದ-1 ರಲ್ಲಿ ನೀಡಲಾಗಿದೆ.

ಅಪರ ಮುಖ್ಯಕಾರ್ಯದರ್ಶಿಗಳು, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ದಿನಾಂಕ 18.05.2017 ರಂದು ನಡೆದ ಸಭೆಯ ನಡವಳಿಯಲ್ಲಿ ತಿಳಿಸಿರುವಂತೆ ಹೆಚ್ಚುವರಿಯಾಗಿ 6700 ಅಭ್ಯರ್ಥಿಗಳಿಗೆ ಅಂದರೆ 11700 ತರಬೇತಿ ನೀಡುವ ಬಗ್ಗೆ ಭೌತಿಕ ಗುರಿಯನ್ನು ಪರಿಷ್ಕರಿಸಲು ತಿಳಿಸಿರುತ್ತಾರೆ. ಈ ಬಗ್ಗೆ ಈಗಾಗಲೇ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಇದರಲ್ಲಿ ಹೆಚ್ಚುವರಿಯಾಗಿ 6700 ಅಭ್ಯರ್ಥಿಗಳಿಗೆ ತರಬೇತಿ ನೀಡಲು ತರಬೇತಿ ವೆಚ್ಚ ಪ್ರತಿ ಅಭ್ಯರ್ಥಿಗೆ ರೂ.25,000 ರಂತೆ ಒಟ್ಟು ರೂ.16.75 ಕೋಟಿ ವೆಚ್ಚವಾಗುತ್ತದೆ. ಈ ಬಗ್ಗೆ ಈಗಾಗಲೇ ಅಧಿಕಾರಯುಕ್ತ ಸಮಿತಿ ಸಭೆಯಲ್ಲಿ ಅನುಮೋದಿಸಿರುತ್ತಾರೆ.

ಮುಖ್ಯ ಕಾರ್ಯದರ್ಶಿಗಳು ಹಾಗೂ ಅಧ್ಯಕ್ಷರು ಕೆ.ಜಿ.ಎಂ.ಎಸ್.ಡಿ.ಸಿ ರವರು 13ನೇ ಗೌರ್ನಿಂಗ್ ಸಭೆಯಲ್ಲಿ ಕೆ.ಜಿ.ಟಿ.ಟಿ.ಐ ಗಳಲ್ಲಿ ನೀಡುವ ತರಬೇತಿಗಳನ್ನು Core Area ದಲ್ಲಿ ಮಾತ್ರ ನೀಡಲು ಅನುಮೋದಿಸಿರುತ್ತಾರೆ. ಅದರಂತೆ ಈ ಹಿಂದೆ ನೀಡಿರುವ 6700 ಅಭ್ಯರ್ಥಿಗಳಿಗೆ ಬದಲಾಗಿ Core Area ತರಬೇತಿಗೆ ಸಂಬಂಧಿಸಿದಂತೆ 5700 ಅಭ್ಯರ್ಥಿಗಳಿಗೆ ತರಬೇತಿ ನೀಡಲು ಈ ಕೆಳಗಿನಂತೆ ಪರಿಷ್ಕರಿಸಲಾಗಿದೆ.

| ಕ್ರಮ ಸಂ | ವಿವರಗಳು | ಒಟ್ಟು ಅಭ್ಯರ್ಥಿಗಳ ಸಂಖ್ಯೆ |
|---|---|---|
| 1 | **Expansion of KGTTIs** | 3500 |
| 2 | **Establishment of KGTTIs Extension Centre** | 1000 |
| 3 | **Establishment of Construction Skill Training Centre at KGTTI Kalburagi** | 1200 |
| | **Total** | 5700 |

ಈಗ ತಮ್ಮ ಪತ್ರ ದಿನಾಂಕ 17-10-2017 ರಲ್ಲಿ ತಿಳಿಸಿರುವ ವಿಷಯಕ್ಕೆ ಸಂಬಂಧಿಸಿದಂತೆ ಈ ಕೆಳಕಂಡ ಮಾಹಿತಿಯನ್ನು ತಮ್ಮ ಅವಗಾಹನೆಗೆ ಸಲ್ಲಿಸಲಾಗಿದೆ.

1) 5700 ಅಭ್ಯರ್ಥಿಗಳಿಗೆ ಉಚಿತವಾಗಿ 3 ತಿಂಗಳ ಅವಧಿಯ ತರಬೇತಿ ನೀಡಲು ಹಾಸ್ಟೆಲ್ ವೆಚ್ಚ ಹೊರತುಪಡಿಸಿ , ತರಬೇತಿ ವೆಚ್ಚ ಒಟ್ಟು ರೂ 577.79/-ಲಕ್ಷಗಳು ವೆಚ್ಚವಾಗುತ್ತದೆ. ವಿವರಗಳನ್ನು ಅನುಬಂದ-2 ರಲ್ಲಿ ನೀಡಲಾಗಿದೆ.
2) ಇದನ್ನು ಅನುಷ್ಠಾನಗೊಳಿಸಲು ಬಂಡವಾಳ ವೆಚ್ಚ ರೂ.200.00 ಲಕ್ಷಗಳು, **Establishment of KGTTIs Exention Centre** ರೂ 290.00 ಲಕ್ಷಗಳು, ಮತ್ತು **Establishment of Construction Skill Training Centre** ರೂ 250.00 ಲಕ್ಷಗಳಾಗಲಿದ್ದು, ಒಟ್ಟಾರೆ ರೂ.740 ಲಕ್ಷಗಳ ಬಂಡವಾಳ ವೆಚ್ಚ ಬೇಕಾಗುತ್ತದೆ. ಈ ಬಂಡವಾಳ ವೆಚ್ಚವನ್ನು ಆಯುಕ್ತಾಲಯದ ಅನುದಾನದಲ್ಲಿ ನೀಡಲು ಈಗಾಗಲೇ ಪ್ರಸ್ತಾವನೆ ಸಲ್ಲಿಸಲಾಗಿದೆ. **(ವಿವರಗಳನ್ನು ಅನುಬಂಧ--3 ರಲ್ಲಿ ನೀಡಲಾಗಿದೆ)**

ಮೇಲಿನ ಕಂಡಿಕೆ (1) ರಂತೆ ಅನುಮೋದನೆ ನೀಡಿ ಸೂಕ್ತ ಸರ್ಕಾರಿ ಆದೇಶ ನೀಡಲು ಕೋರಿದೆ.

ತಮ್ಮ ವಿಶ್ವಾಸಿ,

23/10

ಸದಸ್ಯ ಕಾರ್ಯದರ್ಶಿ
ಕೆ.ಜಿ.ಎಂ.ಎಸ್.ಡಿ.ಸಿ

ANNEXURE 1

| KGMSDC | | | |
|---|---|---|---|
| ACTION PLAN FOR FINANCIAL YEAR 2017-18 | | | |
| Sl. No. | KGTTIs | Financial | Physical |
| | | Rs. In Lakh | No. of Trainees to be Trained |
| 1 | Bangalore | 520 | 1600 |
| 2 | Gulbarga | 530 | 1700 |
| 3 | Belgaum | 800 | 600 |
| 4 | Hubli | 450 | 700 |
| 5 | Mangalore | 800 | 400 |
| **Total** | | **3100** | **5000** |

**KARNATAKA GERMAN TECHNICAL TRAINING INSTITUTE - BENGALURU**

**COURSES OFFERED**

(For School Dropouts, SSLC Pass/Fail and ITI Students & passed outs)

| Course Title | Bengaluru | Kalaburagi | Mangaluru | Belgaum | Hubli | New Centers | | Total | Fees in Rs. | Total Amount |
|---|---|---|---|---|---|---|---|---|---|---|
| | | | | | | Extension Centers Puttur & GBN | Construction skill Kalaburgi | | | |
| Cisco Certified Network Associate (CCNA) | 100 | 60 | 50 | | | | | 210 | 11500 | 2415000 |
| Cisco IT Essentials (Cisco ITE) | 200 | 100 | 280 | 200 | 120 | 600 | 0 | 1500 | 4600 | 6900000 |
| Shield Metal Arc Welding (SMAW) - Basic | 120 | 120 | 120 | | | | | 360 | 19500 | 7020000 |
| Gas Tungsten Arc Welding (GTAW) | 40 | 40 | 40 | | | | | 120 | 6900 | 828000 |
| Gas Metal Arc Welding (GMAW) | 40 | 40 | 40 | | | | | 120 | 6900 | 828000 |
| CNC MACHINIST | 240 | 240 | | 120 | | | | 600 | 15000 | 9000000 |
| CNC Programming and Operation - TURNING | 60 | 80 | -- | 100 | 100 | | | 340 | 5800 | 1972000 |
| CNC Programming and Operation - MILLING | 60 | 80 | -- | 80 | 80 | | | 300 | 6900 | 2070000 |
| Industrial Automation - Technician | 40 | -- | -- | | | | | 40 | 10400 | 416000 |
| Volkswagen Service Technician | 0 | -- | -- | | 140 | | | 140 | 11500 | 1610000 |
| Technician - Refrigeration and Air Conditioning | | | 90 | | | | | 90 | 18000 | 1620000 |
| Technician – Refrigeration | | | 90 | | | | | 90 | 15000 | 1350000 |
| Technician - Air Conditioning | | | 90 | | | | | 90 | 15000 | 1350000 |
| Motor & Pump Maintenance | -- | 40 | -- | | | | | 40 | 12000 | 480000 |
| Domestic Electrician (DE) | | | | | 20 | 160 | 120 | 300 | 12000 | 3600000 |
| House Wiring Technician | | | | | 20 | 120 | 120 | 260 | 12000 | 3120000 |
| AutoCAD 2013 Electrician | | | | | | 120 | 40 | 160 | 12000 | 1920000 |
| Industrial Electrician | | | | | 20 | | | 20 | 12000 | 240000 |
| Scafolding | | | | | | | 160 | 160 | 12000 | 1920000 |
| Plumbing | | | | | | | 160 | 160 | 12000 | 1920000 |
| Bar Bending | | | | | | | 160 | 160 | 12000 | 1920000 |
| Masonry | | | | | | | 60 | 60 | 12000 | 720000 |
| Surveying | | | | | | | 40 | 40 | 12000 | 480000 |
| Site Supervisor (General Works Supervision | | | | | | | 40 | 40 | 12000 | 480000 |
| Municipal Solid Waste Management | | | | | | | 20 | 20 | 12000 | 240000 |
| ETP/STP/WTP Opn & Maint | | | | | | | 120 | 120 | 12000 | 1440000 |
| Painting and Decoration | | | | | | | | | | |
| **Total** | **900** | **800** | **800** | **500** | **500** | **1000** | **1200** | **5700** | | **57,779,000.00** |

ANNEXURE- 3

| | 1st Year | | | |
|---|---|---|---|---|
| | **Sl. No.** | **Centers** | **Capital Expenditure (INR Lakhs)** | **Number Of Trainees** |
| **Free Training FOR School Dropouts /10th Pass /Fail /ITICandidates** | **1** | Five KGTTI Expansion | 200 | 3500 |
| | **2** | Establishment of KGTTI Extension centers Puttur & Gouribidanur | 290 | 1000 |
| | **3** | Construction Training- KGTTI kalaburgi | 250 | 1200 |
| | **Total** | | **740** | **5700** |